ಪಿ.ಡಬ್ಲ್ಯು-2

**ದಿನಾಂಕಃ 27-01-2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲುಃ ಶ್ರೀ ಐ.ಎಸ್.ಎ. ವಕೀಲರಿಂದ**

ನಾನು ಹುಟ್ಟಿದಾಗಿನಿಂದಲೂ ದವಡಬೆಟ್ಟದಲ್ಲಿ ವಾಸಿಸುತ್ತಿದ್ದೇನೆಂದರೆ ಸರಿ. ದಾವ ಆಸ್ತಿ ಪೂರ್ವ ಪಶ್ಚಿಮಃ 40 ಅಡಿ, ಉತ್ತರ ದಕ್ಷಿಣಃ 60 ಅಡಿ ಇರುತ್ತದೆ. ನಾನು ಕ್ರಯಪತ್ರವನ್ನು ನೋಡಿರುತ್ತೇನೆ. ಕ್ರಯಪತ್ರದಲ್ಲಿ ಅಡಿಗಳ ಲೆಕ್ಕದಲ್ಲಿ ವಿಸ್ತೀರ್ಣವನ್ನು ಬರೆದಿರುತ್ತಾರೆ. ವಾದಿಯು ತನ್ನ ಮನೆಯ ಪಶ್ಚಿಮಕ್ಕೆ 20 ಅಡಿ, ದಕ್ಷಿಣಕ್ಕೆ ಸುಮಾರು 18 ಅಡಿ ಖಾಲಿ ಜಾಗವನ್ನು ಬಿಟ್ಟುಕೊಂಡಿರುತ್ತಾರೆ. ನಾನು ಸದರಿ ನಿವೇಶನವನ್ನು ಅಳತೆ ಮಾಡಿರುವುದಿಲ್ಲ ವಿಸ್ತೀರ್ಣವನ್ನು ನೋಡಿ ತಿಳಿದುಕೊಂಡಿರುತ್ತೇನೆ. ದಾವ ಆಸ್ತಿಯ ಮನೆಗೆ ಮೂರು ಕಡೆ ಬಾಗಿಲು ಇರುತ್ತದೆ. ಉತ್ತರದ ಕಡೆ ಮಾತ್ರ ಬಾಗಿಲು ಇರುತ್ತದೆಂದರೆ ಸರಿಯಲ್ಲ. ವಾದಿಗಳಿಗೆ ದಕ್ಷಿಣ ಮತ್ತು ಪಶ್ಚಿಮದ ಕಡೆ ಯಾವುದೇ ಜಾಗವಿರುವುದಿಲ್ಲವೆಂದರೆ ಸರಿಯಲ್ಲ. ವಾದಿಗಳಿಗೆ ಮನೆ ಕಟ್ಟಲು ನೀಡಿದ ಪರವಾನಗಿಯನ್ನು ನೋಡಿರುವುದಿಲ್ಲ. ವಾದಿಗಳ ಮನೆಯನ್ನು ಸುಮಾರು 45 ವರುಷಗಳ ಹಿಂದೆ ಕಟ್ಟಿರುತ್ತಾರೆ. ವಾದಿಯು ಪೂರ್ವ ಪಶ್ಚಿಮ 10 ಗಜ, ಉತ್ತರ ದಕ್ಷಿಣ 30 ಗಜ ಮಾತ್ರ ಖರೀದಿಸಿರುತ್ತಾರೆಂದರೆ ಸರಿಯಲ್ಲ. ಸದರಿ ಸ್ವತ್ತುನ್ನು ಸೀತರಾಮಯ್ಯನವರಿಂದ ಖರೀದಿಸಿರುತ್ತಾರೆ. ಖರೀದಿಸಿದ ಸಂಪೂರ್ಣ ಜಾಗದಲ್ಲಿ ಮನೆಯನ್ನು ಕಟ್ಟಿರುತ್ತಾರೆಂದರೆ ಸರಿಯಲ್ಲ. ಯಾವುದೇ ಜಾಗವನ್ನು ಬಿಟ್ಟುರುವುದಿಲ್ಲವೆಂದರೆ ಸರಿಯಲ್ಲ. ವಾದಿಯು ಪಶ್ಚಿಮದ ಕಡೆ ಬಾಗಿಲನ್ನು ತೆಗೆಯಬೇಕೆಂದು ಪ್ರಯತ್ನಿಸಿರುತ್ತಾರೆಂದರೆ ಸಾಕ್ಷಿಯು ಮೊದಲನೇ ಇತ್ತು ಎಂದು ನುಡಿಯುತ್ತಾರೆ. ಆಗ ಊರಿನ ಜನರೆಲ್ಲಾ ವಿರೋಧ ವ್ಯಕ್ತಪಡಿಸಿ ಮುಚ್ಚಿಸಿರುತ್ತಾರೆಂದರೆ ಸರಿಯಲ್ಲ.

ಆಗ ವಾದಿಯು ಒಂದು ದಾವೆಯನ್ನು ಸಲ್ಲಿಸಿದ್ದು ಅದು ವಜಾಗೊಂಡಿರುತ್ತದೆಂದರೆ ಸರಿಯಲ್ಲ. ಪಶ್ಚಿಮದ ಕಡೆ ಬಾಗಿಲು ಇರುತ್ತದೆಂದು ವಾದಿಯು ಪಂಚಾಯತಿಯಿಂದ ಪರವಾನಗಿ ಪಡೆದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ವಾದಿಯ ಮನೆಯ ಪಶ್ಚಿಮದ ಕಡೆ ಮನೆಯಿಂದ 15 ಅಡಿ ದೂರದಲ್ಲಿ ನಾಗರಕಟ್ಟೆ ಇರುತ್ತದೆಂದರೆ ಸಾಕ್ಷಿಯು 30 ಅಡಿ ದೂರದಲ್ಲಿರುತ್ತದೆಂದು ನುಡಿಯುತ್ತಾರೆ. ಈ ಮದ್ಯದಲ್ಲಿ ಪಿ ಡಬ್ಲ್ಯೂ ಡಿ ರಸ್ತೆ ಇರುತ್ತದೆಂದರೆ ಸರಿ. ಸದರಿ ನಾಗರಕಟ್ಟೆ ಸುತ್ತುಲೂ ಇರುವ ಖಾಲಿ ಪ್ರದೇಶವನ್ನು ಸಾರ್ವಜನಿಕರು ಜಾತ್ರೆ ಸಮಯದಲ್ಲಿ ಉಪಯೋಗಿಸಿಕೊಳ್ಳುತ್ತಾರೆಂದರೆ ಸರಿ. ಪಶ್ಚಿಮದ ಕಡೆ ವಾದಿಯು ಬಾಗಿಲನ್ನು ತೆಗೆದರೆ ಸಾರ್ವಜನಿಕರಿಗೆ ಅಡಚಣೆ ಉಂಟಾಗುತ್ತದೆಂದರೆ ಸರಿಯಲ್ಲ. ನಮ್ಮ ಊರಿನ ಎಲ್ಲಾ ಪ್ರಕರಣಗಳಲ್ಲಿ ಸಾಕ್ಷಿಯಾಗಿ ಖಾಯಂ ಆಗಿ ಹೇಳುತ್ತೇನೆಂದರೆ ಸಾಕ್ಷಿಯು ನಾಲ್ಕೈದು ಪ್ರಕರಣಗಲ್ಲಿ ಹೇಳಿರಬಹುದು ಎಂದು ನುಡಿಯುತ್ತಾರೆ. ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

(ಮರು ವಿಚಾರಣೆ ಇಲ್ಲ)

**(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**ಎ.ಸಿ.ಜೆ., ಪಾವಗಡ.**